
# ‘ಸುಳಿವ ಜಂಗಮ’ ವಚನಗಳ ಮೀಮಾಂಸೆ




**ಕೃತಿ:** ಸುಳವ ಜಂಗಮ
**ಲೇಖಕರು :** ಡಾ. ಎಚ್.ಎನ್. ಮುರಳೀಧರ
**ಪ್ರಕಾಶನ :** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
**ಪುಟ:** 16+462 **ಬೆಲೆ :** 400

೧೨ ನೇ ಶತಮಾನದ ವಚನಕಾರರ ರಚನೆಗಳಲ್ಲಿ ಕಂಡುಬರುವ ವೈವಿಧ್ಯಮಯವಾದ ಅಭಿವ್ಯಕ್ತಿಗೆ ಹಲವು ಬಗೆಯ ವಿಶ್ಲೇಷಣೆ, ವಿವರಣೆ ಹಾಗೂ ಅರ್ಥಗ್ರಹಿಕೆ ಸಾಧ್ಯವಿದೆ. ಒಂದೆಡೆ ಅದು ವಚನಕಾರರ ಅನುಭಾವ- ಅಭಿವ್ಯಕ್ತಿಯ ಎತ್ತರವನ್ನು ಅವಲಂಬಿಸಿರುವಂತೆ, ಇನ್ನೊಂದೆಡೆ ಅರ್ಥೈಸುವವನ ಸಾಮರ್ಥ್ಯದ ದ್ಯೋತಕವೂ ಆಗಿದೆ. ಈ ನಿಟ್ಟಿನಲ್ಲಿ ಡಾ. ಹೆಚ್.ಎನ್. ಮುರಳೀಧರ ಅವರ ‘ಸುಳಿವ ಜಂಗಮ’ ಕೃತಿಯಲ್ಲಿ ಹತ್ತು ಹಲವು ವಚನಗಳನ್ನು ಭಿನ್ನ ಭಿನ್ನ ನೆಲೆಗಳಲ್ಲಿ ಅರ್ಥೈಸುವ ಹಾಗೂ ವಿಶ್ಲೇಷಿಸುವ ಪ್ರಯತ್ನ ಸಮರ್ಥವಾಗಿ ಮೂಡಿ ಬಂದಿದೆ.

ಈ ಕೃತಿಯು ಪ್ರಧಾನವಾಗಿ ಬಸವೇಶ್ವರ, ಅಲ್ಲಮಪ್ರಭು, ಅಕ್ಕಮಹಾದೇವಿ ಮುಂತಾದ ವಚನಕಾರರ ೧೫೧ವಚನಗಳನ್ನು ಕುರಿತು ವಿಶ್ಲೇಷಣಾತ್ಮಕವಾಗಿ ಬರೆದ ಲೇಖನಗಳ ಸಂಕಲನ. ಲೇಖಕರ ನುಡಿಯಲ್ಲಿ ಹೇಳಿರುವಂತೆ: ‘‘ಈ ಬರಹಗಳು ಈಗ ಸುಮಾರು ನಾಲ್ಕು ವರ್ಷಗಳಿಂದ ‘ವಿಜಯವಾಣಿ’ ದಿನ ಪತ್ರಿಕೆಯಲ್ಲಿ ‘ಜ್ಯೋತಿರ್ಲಿಂಗ’ ಎಂಬ ಹೆಸರಿನ ವಾರದ ಅಂಕಣದ ಬರಹವಾಗಿ ಪ್ರಕಟವಾಗುತ್ತ ಬಂದಿವೆ.’’ ಇಲ್ಲಿನ ಬರಹಗಳು ದಿನಪತ್ರಿಕೆಯ ಅಂಕಣ ಬರಹಗಳಾಗಿದ್ದರೂ, ಸಾಮಾನ್ಯವಾಗಿ ಇಂಥ ಅಂಕಣಗಳಲ್ಲಿ ಕಂಡುಬರುವ ಜನಪ್ರಿಯ ಲೇಖನಗಳ ಧಾಟಿ ಇಲ್ಲಿನದಲ್ಲ; ಜನರಂಜನೆಯೋ, ಮನರಂಜನೆಯೋ ಗುರಿಯಾಗಿ ಉಳ್ಳ ‘ಚಿತ್ತಾಕರ್ಷಕ’ ವಿಷಯಗಳೂ ಇಲ್ಲಿನವಲ್ಲ; ಗಂಭೀರ ಓದುಗರ, ಅಧ್ಯಯನಶೀಲರ, ಅದಕ್ಕಿಂತಲೂ ಹೆಚ್ಚಾಗಿ ವಿಮರ್ಶಾತ್ಮಕ ದೃಷ್ಟಿಯ ಚಿಂತಕರ ಆಳವಾದ ವಿಶ್ಲೇಷಣೆಯ ಕ್ರಮ ಇಲ್ಲಿನದು. ಆದ್ದರಿಂದ ಈ ಸಂಕಲನವು ಸಾಮಾನ್ಯವಾಗಿ ಪ್ರಕಟವಾಗುವ ‘ಅಂಕಣ ಬರಹಗಳ ಸಂಕಲನ’ ದಂತೆ ಗ್ರಂಥ ಭಂಡಾರದ ಖಾಲಿ ಜಾಗವನ್ನು ತುಂಬುವ ‘ಶಾಶ್ವತ ಸಾಹಿತ್ಯ’ವೆನಿಸದೆ, ಮೌಲಿಕ ಚಿಂತನೆಯ ಸರಣಿ-ಬರಹಗಳ ‘ಗಟ್ಟಿಸಾಹಿತ್ಯ’ ವೆನಿಸುತ್ತದೆ. ಒಂದೊಂದು ಬರಹವೂ ಸ್ವಯಂಪೂರ್ಣ; ಎಲ್ಲವೂ ಸೇರಿ ಗ್ರಂಥವೂ ಪರಿಪೂರ್ಣ. ವಿಶೇಷವಾಗಿ, ‘ಕಾಡುವ’ ವಚನಗಳಿಗೆ ಸರಿಸಾಟಿಯಾದ ಸೂಕ್ಷ್ಮಸಂವೇದನೆ ಲೇಖಕರ ವಿವರಣೆಯಲ್ಲಿ ಕಂಡುಬರುತ್ತದೆ.

ಬರಹದ ಶೈಲಿಗೆ ಒಂದು ಸಣ್ಣ ಉದಾಹರಣೆ : (ಅಕ್ಕಮಹಾದೇವಿಯ ‘ಚಿಲಿಮಿಲಿಯೆಂದೋದುವ ಗಿಳಿಗಳಿರಾ! ನೀವು ಕಾಣಿರೇ?’ ವಚನವನ್ನು ಕುರಿತು) ‘‘ಇಲ್ಲಿ ಮಾನುಷವು ದೈವದೊಂದಿಗೆ ಕರಗುವುದು ಸೃಷ್ಟಿ ಸೋಪಾನದ ಜೀವವೈವಿಧ್ಯದ ಮೂಲಕ. ಅಥವಾ ದೈವವನ್ನು ಅನುಸಂಧಾನಕ್ಕೆ ಅಳವಡಿಸಿಕೊಳ್ಳುವುದೇ ಜೀವಸಂಕುಲದ ವಿವರಗಳ ಮೂಲಕ. ಹೀಗೆ ನೋಡಿದರೆ ಇಲ್ಲಿ ಹುಡುಕುವಿಕೆ ಮತ್ತು ಕಂಡುಕೊಳ್ಳುವಿಕೆ ಎಂಬ ಹಂತಗಳನ್ನು ವಿಭಾಗಿಸುವುದೂ ಕಷ್ಟವೆ. ಹೀಗಾಗಿ ಈ ಎಲ್ಲ ಪಕ್ಷಿಸಂಕುಲ ಚೆನ್ನಮಲ್ಲಿಕಾರ್ಜುನನ ಬಗೆಗಿನ ಸಂದೇಶವನ್ನು ಸಾರುವ ವಾಹಕವಾಗಿ ಅಕ್ಕಮಹಾದೇವಿಗೆ ಕಂಡದ್ದರಲ್ಲಿ ಯಾವ ಅಚ್ಚರಿಯಿದೆ?’’ ಈ ರೀತಿ ವಿಶ್ಲೇಷಣೆ ಮುಂದುವರಿಯುತ್ತದೆ. (ಪು.೨೧೭).

ಉತ್ತಮ ಸಾಹಿತ್ಯ ಕೃತಿಯೊಂದರ ಲಕ್ಷಣವಾದ ಸುಲಲಿತ ಶೈಲಿ, ಗಂಭೀರ ಭಾಷೆ, ಅರ್ಥಗರ್ಭಿತ ಹಾಗೂ ಭಾವಸಂಪನ್ನ ನಿರೂಪಣೆ — ಇವೆಲ್ಲವೂ ಈ ಕೃತಿಯಲ್ಲಿ ಕಂಡುಬರುತ್ತದೆ. ಕನ್ನಡ ಸಾಹಿತ್ಯಕ್ಕೆ ಸೇರ್ಪಡೆಯಾದ ಒಂದು ಅಪೂರ್ವ ಕೃತಿಯಿದು.

ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಪ್ರಸಾರಂಗದಿಂದ ಈ ಕೃತಿ ಪ್ರಕಟವಾಗಿದೆ. ಅಚ್ಚುಕಟ್ಟಾದ ಮುದ್ರಣ ಹಾಗೂ ಮುಖಪುಟಗಳಿಂದ ಕೂಡಿರುವ ಈ ಕೃತಿ, ಗಂಭೀರ ಓದುಗರಿಗೂ, ಅಧ್ಯಯನಶೀಲರಿಗೂ, ವಚನಗಳನ್ನು ಕುರಿತು ಹೆಚ್ಚು ತಿಳಿಯಬಯಸುವವರಿಗೂ ಸಂಗ್ರಹಯೋಗ್ಯವಾದ ಗ್ರಂಥವಾಗಿದೆ.